# ಸುದ್ದಿ ಸಂಚಯ

✪ ಶ್ರೀಮಾತೆ ಶಾರದಾದೇವಿಯವರ ೧೫೦ನೆಯ ಜನ್ಮ ದಿನೋತ್ಸವದ ನೆನಪಿನಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜನ್ಮಸ್ಥಾನವಾದ ಕಾಮಾರ್‌ಪುಕುರಿನಲ್ಲಿ ಒಂದು ಧರ್ಮಾರ್ಥ ಚಿಕಿತ್ಸಾಲಯ ಹಾಗೂ ಗುಡಿಕೈಗಾರಿಕೆ ಕಟ್ಟಡಗಳ ಸಂಕೀರ್ಣವನ್ನು ೨೦೦೫ರ ಏಪ್ರಿಲ್ ೧೩ರಂದು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜರು ಉದ್ಘಾಟಿಸಿದರು. ಅನೇಕ ಹಿರಿಯ ಸಂನ್ಯಾಸಿಗಳು, ಜಿಲ್ಲಾಧಿಕಾರಿಗಳು ಹಾಗೂ ಸ್ಥಾನೀಯ ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

✪ ಲಕ್ನೌದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮದ ವಿವೇಕಾನಂದ ಪಾಲಿಕ್ಲಿನಿಕ್ ೨೦೦೫ರ ಏಪ್ರಿಲ್ ೨ ಮತ್ತು ೩ರಂದು ಶಿಶುಗಳ ಹೃದ್ರೋಗಗಳ ಕುರಿತು ವಿಶೇಷ ಕಾರ್ಯಾಗಾರವನ್ನು ಆಯೋಜಿಸಿತ್ತು. ಪ್ರಸಿದ್ಧ ತಜ್ಞರು ಮಾತನಾಡಿ ಆಧುನಿಕ ವಿಧಾನಗಳ ಕುರಿತು ತಿಳಿಸಿದರು.

✪ ಹೈದರಾಬಾದಿನ ರಾಮಕೃಷ್ಣ ಮಠದ ಅಂಗಸಂಸ್ಥೆಯಾದ ವಿವೇಕಾನಂದ ಮಾನವ ಉತ್ಕೃಷ್ಟತೆ ಸಂಸ್ಥೆಯು ೧.೦೪.೨೦೦೪ರಿಂದ ೩೧.೦೩.೨೦೦೫ರವರೆಗಿನ ಅವಧಿಯಲ್ಲಿ ೩೯ ವಿಭಿನ್ನ ರೀತಿಯ ತರಬೇತಿಗಳನ್ನು ನೀಡಿ ತನ್ಮೂಲಕ ೪೩,೭೮೯ ಪುರುಷರು ಹಾಗೂ ೨೭,೭೬೦ ಮಹಿಳೆಯರು ಉಪಯೋಗ ಪಡೆದಿದ್ದಾರೆ. ಗೀತಾದರ್ಶನ ವಿಭಾಗವನ್ನು ೧೮.೭೯ ಜನರು ವೀಕ್ಷಿಸಿದ್ದಾರೆ ಎಂದು ಅವರ ವರದಿ ಪ್ರಕಟಿಸಿದೆ.

✪ ೧೮೯೨ರ ಏಪ್ರಿಲ್‌ನಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಸಂಚರಿಸುತ್ತ ಗುಜರಾತಿನ ಬರೋಡಾದ ದಿವಾನರಾಗಿದ್ದ ಶ್ರೀ ಮಣಿಲಾಲ್ ಜಶ್‌ಭಾಯ್ ಅವರ ಅತಿಥಿಯಾಗಿ ದಿಲಾರಾಮ್ ಬಂಗಲೆಯಲ್ಲಿ ತಂಗಿದ್ದರು. ೨೦೦೫ ಏಪ್ರಿಲ್ ೧೮, ಶ್ರೀರಾಮನವಮಿಯಂದು ಈ ಪವಿತ್ರ ಸ್ಥಾನವನ್ನು ಗುಜರಾತಿನ ಮುಖ್ಯಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರು ರಾಮಕೃಷ್ಣ ಮಿಷನ್ನಿಗೆ ಹಸ್ತಾಂತರಿಸಿದರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜರು ಬಂಗಲೆಯ ಬೀಗದ ಕೈಗಳನ್ನು ಸಾಂಕೇತಿಕವಾಗಿ ಸ್ವೀಕರಿಸಿದರು. ಈ ಬಂಗಲೆಯಲ್ಲಿ ರಾಮಕೃಷ್ಣ ಮಹಾಸಂಘದ ಒಂದು ಶಾಖೆಯನ್ನು ತೆರೆದು ಅಲ್ಲಿ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳನ್ನು ಆಧರಿಸಿದ ಸ್ಮಾರಕವೊಂದನ್ನು ನಿರ್ಮಿಸಲಾಗುವುದು.

✪ ಉತ್ತರಪ್ರದೇಶದ ವೃಂದಾವನದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮವು ಅದರ ಧರ್ಮಾರ್ಥ ಆಸ್ಪತ್ರೆಗೆ ೨೦೦೫ ಏಪ್ರಿಲ್ ೧೬ರಂದು I.C.U.—ತುರ್ತು ಆರೈಕೆ ವಿಭಾಗವನ್ನು ಸೇರಿಸಿದೆ. ಈ ಹೊಸ ವಿಭಾಗವನ್ನು ಉತ್ತರಪ್ರದೇಶದ ಆರೋಗ್ಯ ಸಚಿವರಾದ ಠಾಕೂರ್ ಶ್ರೀ ಜೈಬೀರ್ ಸಿಂಗ್ ಉದ್ಘಾಟಿಸಿದರು. ಲಕ್ನೌ ಕೇಂದ್ರದ ಕಾರ್ಯದರ್ಶಿಗಳಾದ ಸ್ವಾಮಿ ಮುಕ್ತಿನಾಥಾನಂದಜಿ ಹಾಗೂ ಇತರ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

✪ ೨೦೦೫ರ ಏಪ್ರಿಲ್ ೧೧ರಂದು ಪರಮಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜರು ರಾಜ್‌ಕೋಟ್‌ನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ವಿವೇಕಾನಂದ ಮೌಲ್ಯಶಿಕ್ಷಣ ಮತ್ತು ಸಂಸ್ಕೃತಿ ಸಂಸ್ಥೆಯನ್ನು ಉದ್ಘಾಟಿಸಿದರು. ಗುಜರಾತಿನ ಯುವಕ–ಯುವತಿಯರಿಗೆ ಹಾಗೂ ಜನಸಾಮಾನ್ಯರಿಗೆ ಅನೇಕ ರೀತಿಯ ಉಪಯುಕ್ತ ಕಾರ್ಯಕ್ರಮಗಳನ್ನು ಈ ಸಂಸ್ಥೆಯು ಆಯೋಜಿಸಿದೆ.



**ಸ್ವಾಮಿ ರಂಗನಾಥಾನಂದಜಿ ಮಹಾರಾಜರ ಶ್ರದ್ಧಾಂಜಲಿಯ ನಿಮಿತ್ತ ನಡೆದ ವಿಶೇಷ ಹೋಮ.**

✪ ೨೦೦೫ರ ಮೇ ೭ರಂದು ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ರಾಮಕೃಷ್ಣ ಸಂಘದ ಎಲ್ಲ ಶಾಖೆಗಳಲ್ಲೂ ಆಚರಿಸಿದಂತೆ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವೂ ಆಚರಿಸಿತು. ಭಗವಾನ್ ಶ್ರೀರಾಮಕೃಷ್ಣರ ವಿಶೇಷ ಪೂಜೆಯ ನಂತರ ಹಿರಿಯರು ಪೂಜ್ಯರ ಬಗ್ಗೆ ಮಾತನಾಡಿ ಸ್ಮರಿಸಿದರು. ಪೂಜ್ಯರ ಭಾಷಣ ಹಾಗು ಅವರ ಮೈಸೂರು ಭೇಟಿಯ ವಿಡಿಯೊ ದೃಶ್ಯಗಳನ್ನು ಸಂಜೆ ತೋರಿಸಲಾಯಿತು.